ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಗದಗ ಜಿಲ್ಲೆ

# ಕೃಷಿ ದರ್ಪಣ

ತ್ರೈಮಾಸಿಕ ಸುದ್ದಿ ಪತ್ರಿಕೆ

ಸಂಪುಟ–6 | ಜನವರಿ ರಿಂದ ಮಾರ್ಚ್, 2026 | ತ್ರೈಮಾಸಿಕ ಪತ್ರಿಕೆ | ಸಂಚಿಕೆ–1

## VB-GRAM G ಜಾಗೃತಿ ಕಾರ್ಯಕ್ರಮ



ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ್ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಆವರಣದಲ್ಲಿ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) (VB-GRAM G) ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



ಈ ಕಾರ್ಯಕ್ರಮದಲ್ಲಿ, ಗ್ರಾಮೀಣ ಕುಟುಂಬಗಳ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ಅದರ ಸಾಮಾಜಿಕ ಭದ್ರತಾ ಕ್ರಮಗಳ ಮೇಲೆ ವಿಶೇಷ ಒತ್ತು ನೀಡುವ ಕಾಯ್ದೆಯ ಪ್ರಮುಖ ವಿಷಯಗಳನ್ನು ವಿವರಿಸಲಾಯಿತು. ನಿರುದ್ಯೋಗದ ಅವಧಿಯಲ್ಲಿ ಅರ್ಹ ಉದ್ಯೋಗಾಕಾಂಕ್ಷಿಗಳಿಗೆ ತಾತ್ಕಾಲಿಕ ಆದಾಯ ಬೆಂಬಲವನ್ನು ಒದಗಿಸಲು ವಿನ್ಯಾಸಗೊಳಿಸಲಾದ ನಿರುದ್ಯೋಗ ಭತ್ಯೆ ಕುರಿತು ಮಾಹಿತಿ ನೀಡಲಾಯಿತು.



ಈ ಯೋಜನೆಯ ಪ್ರಮುಖ ಅಂಶಗಳೆನೆಂದರೆ, ಕೌಶಲ್ಯ ಅಭಿವೃದ್ಧಿಗೆ ಬೆಂಬಲ, ಗ್ರಾಮ ಆಧಾರಿತ ಉದ್ಯಮಗಳ ಪ್ರಚಾರ, ಸ್ವ-ಉದ್ಯೋಗ, ಸಣ್ಣ ಕೈಗಾರಿಕೆ ಮತ್ತು ಕೃಷಿ ಆಧಾರಿತ ಉದ್ಯಮಗಳಿಗೆ ಸಹಾಯ ಕಲ್ಪಿಸುವುದಾಗಿದೆ.



ಸಮಗ್ರ ಗ್ರಾಮೀಣ ಅಭಿವೃದ್ಧಿ ಮತ್ತು ಸಮೃದ್ಧಿಗಾಗಿ VB-GRAM-G ಗ್ರಾಮೀಣ ಉದ್ಯೋಗಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ ಎಂದು ಡಾ. ಮಂಜುಪ್ರಕಾಶ್ ಪಾಟೀಲ್, ವಿಷಯ ತಜ್ಞರು (ಕೃಷಿ ವಿಸ್ತರಣೆ) ಇವರು ವಿವರಿಸಿದರು.

ರೈತರು, ರೈತ ಮಹಿಳೆಯರು ಮತ್ತು ಗ್ರಾಮೀಣ ಯುವಕರು ಒಟ್ಟಾರೆಯಾಗಿ 75 ಜನ ರೈತರು ಹಾಗೂ ಯುಕರು ಭಾಗವಹಿಸಿದ್ದರು.

# ಸಿರಿಧಾನ್ಯ ಮತ್ತು ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆ

ಕೃಷಿ ಇಲಾಖೆ, ಗದಗ ಹಾಗೂ ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ ಸಹಯೋಗದಲ್ಲಿ ಏರ್ಪಡಿಸಿದ್ದ, ಜಿಲ್ಲಾ ಮಟ್ಟದಲ್ಲಿ ಸಿರಿಧಾನ್ಯ ಮತ್ತು ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆಯನ್ನು ಶ್ರೀ ಸಿ.ಎನ್.ಶ್ರೀಧರ್, ಜಿಲ್ಲಾಧಿಕಾರಿ, ಗದಗ ಇವರು ಉದ್ಘಾಟಿಸಿ ಸಿರಿಧಾನ್ಯಗಳು ಕಡಿಮೆ ರಸಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಿಂದ ಬೆಳೆಯುತ್ತಿದ್ದು, ಪೌಷ್ಟಿಕಾಂಶಗಳ ಆಗರವಾಗಿರುತ್ತವೆ. ಇವುಗಳ ನಿಯಮಿತವಾದ ಸೇವನೆಯಿಂದ, ಈಗಿನ ಜೀವನ ಶೈಲಿಯಲ್ಲಿ ಸಾಮಾನ್ಯವಾಗಿ ಕಂಡುಬರುವ ಸಕ್ಕರೆ ರೋಗ, ರಕ್ತದೊತ್ತಡ, ಬೊಜ್ಜು ಇತ್ಯಾದಿಗಳನ್ನು ಯಶಸ್ವಿಯಾಗಿ ನಿರ್ವಹಿಸಬಹುದಾಗಿದೆ. ಆದ್ದರಿಂದ ಆಹಾರದಲ್ಲಿ ಸಿರಿಧಾನ್ಯಗಳನ್ನು ಹೆಚ್ಚು ಹೆಚ್ಚಾಗಿ ಬಳಸಿದಲ್ಲಿ ಆರೋಗ್ಯಕರವಾದ ಜೀವನವನ್ನು ನಡೆಸಲು ಸಾಧ್ಯ ಎಂದು ತಿಳಿಸಿದರು.



ಸದರಿ ಸ್ಪರ್ಧೆಯಲ್ಲಿ ಗದಗ ಜಿಲ್ಲೆಯ ವಿವಿಧ ತಾಲೂಕು ಹಾಗೂ ಗ್ರಾಮಗಳಿಂದ ಒಟ್ಟು 73 ಜನ ಮಹಿಳೆಯರು, ವೈವಿಧ್ಯಮಯ ಹಾಗೂ ರುಚಿಕರವಾದ ವಿವಿಧ ಸಿರಿಧಾನ್ಯದ ಹಾಗೂ ಮರೆತು ಹೋದ ಖಾದ್ಯ ತಯಾರಿಸಿ, ಆಕರ್ಷಕವಾಗಿ ಪ್ರದರ್ಶಿಸಿದರು. ಹಾಗೆಯೇ ಸಿರಿಧಾನ್ಯದ ಖಾರದ ಖಾದ್ಯಗಳಲ್ಲಿ ರುಚಿಕರವಾದ ವಡೆಗಳು, ನುಚ್ಚು, ಅಂಬಲಿ, ಹಪ್ಪಳ, ಚಕ್ಕುಲಿ, ಕಿಚಡಿ, ರೋಲ್ಸ್, ರೊಟ್ಟಿಗಳು, ತಾಲಿಪಟ್ಟುಗಳು, ಎಣ್ಣೆ ಹೋಳಿಗೆ, ಪಲಾವ್, ದೋಸೆ, ಮಾಲ್ಟ್ ಇತ್ಯಾದಿಗಳು ನೋಡುಗರನ್ನು ಸವಿಯಲು ಕೈಬೀಸಿ ಕರೆಯುತ್ತಿದ್ದವು. ಇವುಗಳಲ್ಲದೇ, ಮರೆತು ಹೋದ ಖಾದ್ಯಗಳ ವಿಭಾಗದಲ್ಲಿ ಪೌಷ್ಟಿಕರವಾದ ಗುಳ್ಳಡಿಕೆ ಉಂಡಿ, ಹೊಂಬಾಳೆ ವಡೆ, ಹಲಸಿನ ಎಲೆ ಇಡ್ಲಿ, ಕೆಸುವಿನ ಗಡ್ಡೆಯ ಕಟ್ಲೆಟ್ ಇತ್ಯಾದಿಗಳು ಬಾಯಲ್ಲಿ ನೀರೂರಿಸುವಂತಿದ್ದವು.



ಸಿರಿಧಾನ್ಯದ ಸಿಹಿ ಖಾದ್ಯಗಳು, ಸಿರಿಧಾನ್ಯದ ಖಾರದ ಖಾದ್ಯಗಳು ಹಾಗೂ ಮರೆತು ಹೋದ ಖಾದ್ಯಗಳ ಮೂರೂ ವಿಭಾಗಗಳಲ್ಲಿ ತಲಾ ಮೂರು ಬಹುಮಾನಗಳನ್ನು ಪ್ರಮಾಣಪತ್ರಗಳೊಂದಿಗೆ ವಿತರಿಸಲಾಯಿತು. ಭಾಗವಹಿಸಿದ ಎಲ್ಲಾ ಅಭ್ಯರ್ಥಿಗಳಿಗೂ ಅಭಿನಂದನಾ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

# ಟ್ರ್ಯಾಕ್ಟರ್ ಹಾಗೂ ಕೃಷಿ ಯಂತ್ರೋಪಕರಣಗಳ ನಿರ್ವಹಣೆ ಮತ್ತು ದುರಸ್ತಿ ಕುರಿತು ತರಬೇತಿ ಕಾರ್ಯಕ್ರಮ



ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಹಾಗೂ ಹೈದರಾಬಾದನ ಐ.ಸಿ.ಎ.ಆರ್– ರಾಷ್ಟ್ರೀಯ ಕೃಷಿ ಸಂಶೋಧನಾ ನಿರ್ವಹಣಾ ಅಕಾಡೆಮಿ (ನಾರ್ಮ್) ಸಂಸ್ಥೆಯ ಸಹಯೋಗದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಅಡಿ ದಿನಾಂಕ 19 ರಿಂದ 24ನೇ ಜನವರಿ 2026 ರ ವರೆಗೆ ಹುಲಕೋಟಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಟ್ರ್ಯಾಕ್ಟರ್ ಹಾಗೂ ಕೃಷಿ ಯಂತ್ರೋಪಕರಣಗಳ ನಿರ್ವಹಣೆ ಮತ್ತು ದುರಸ್ತಿ ಹಾಗೂ ಕೃಷಿಯಲ್ಲಿ ಡ್ರೋಣ್‌ಗಳ ಪಕ್ಷಿನೋಟದ ಕುರಿತು ಆರು ದಿನಗಳ ತರಬೇತಿ ಕಾರ್ಯಕ್ರಮ ಏರ್ಪಡಿಸಲಾಯಿತು. ದಿನಾಂಕ 19-01-2026 ರಂದು ತರಬೇತಿಯನ್ನು ಎಸ್.ಬಿ. ಐ-ಎ.ಎಸ್.ಎಫ್–ಆರ್‌ಸೆಟಿ ನಿರ್ದೇಶಕರಾದ ಶ್ರೀ ಶಿವಕುಮಾರ ಅವರು ಉದ್ಘಾಟಿಸಿದರು. ತರಬೇತಿ ಕಾರ್ಯಕ್ರಮದ ಸಂಯೋಜಕ ಡಾ. ವಿನಾಯಕ ನಿರಂಜನ್ ಇವರು ತರಬೇತಿಯ ಮುಖ್ಯ ಉದ್ದೇಶಗಳು, ತರಬೇತಿಯಿಂದ ಶಿಬಿರಾರ್ಥಿಗಳಿಗೆ ಆಗುವ ಅನುಕೂಲಗಳ ಕುರಿತು ತಿಳಿಸಿದರು. ದಿನಾಂಕ 23-01-2026 ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಐ.ಸಿ.ಎ.ಆರ್–ನಾರ್ಮ ನ ಪ್ರಧಾನ ವಿಜ್ಞಾನಿ ಡಾ.ಬಿ.ನಿರ್ಮಲಾ ಇವರು ಭಾಗವಹಿಸಿ ಶಿಬಿರಾರ್ಥಿಗಳಿಗೆ ಪ್ರಸ್ತುತ ಸಮಯದಲ್ಲಿ ಯಾಂತ್ರೀಕೃತ ಕೃಷಿ ಹೆಚ್ಚು ಅಳವಡಿಕೆಯಾಗುತ್ತಿದ್ದು, ಪ್ರಸಕ್ತ



ತರಬೇತಿಯು ಗ್ರಾಮೀಣ ಭಾಗದಲ್ಲಿ ಕೃಷಿ ಯಂತ್ರೋಪಕರಣಗಳ ಸಮರ್ಪಕ ನಿರ್ವಹಣೆಗೆ ಸಹಕಾರಿಯಾಗಲಿದೆ ಎಂದು ಅಭಿಪ್ರಾಯ ಪಟ್ಟರು. ಜೊತೆಗೆ, ಈ ತರಬೇತಿಯು ಕೌಶಲ್ಯ ಆಧಾರಿತ ಪ್ರಾಯೋಗಿಕ ತರಬೇತಿಯಾಗಿದ್ದು, ಇದರ ಸದುಪಯೋಗದಿಂದ ಸ್ವಉದ್ಯೋಗ ಸೃಷ್ಟಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಸಹಾಯಕ ಕೃಷಿ ನಿರ್ದೇಶಕಿ ಶ್ರೀಮತಿ ಮೇಘನಾ ನಾಡಿಗೇರ ಇವರು ಮಾತನಾಡಿ ಕೃಷಿ ಇಲಾಖೆಯಲ್ಲಿನ ವಿವಿಧ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿ ಯುವಕರು ಸ್ವಾವಲಂಬಿಗಳಾಗಬೇಕು ಎಂದು ಹೇಳಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥೆ ಡಾ.ಸುಧಾ ವ್ಹಿ. ಮಂಕಣಿ ಇವರು ತರಬೇತಿಯನ್ನು ಆಯೋಜಿಸಲು ಆರ್ಥಿಕ ನೆರವು ಹಾಗೂ ಸಹಕಾರ ನೀಡಿದ ಐ.ಸಿ.ಎ.ಆರ್–ನಾರ್ಮ ಸಂಸ್ಥೆಗೆ ಅಭಿನಂದನೆ ಸೂಚಿಸಿದರು ಹಾಗೂ ಮುಂಬರುವ ದಿನಗಳಲ್ಲಿ ಗದಗ ಜಿಲ್ಲೆಯ ರೈತರು, ರೈತ ಮಹಿಳೆಯರು ಹಾಗೂ ಯುವಕರಿಗೆ ಸಹಾಯವಾಗುವ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಭರವಸೆ ನೀಡಿದರು. ಇದೇ ಸಂದರ್ಭದಲ್ಲಿ ಶಿಬಿರಾರ್ಥಿಗಳಿಗೆ ತರಬೇತಿ ಕಿಟ್ ಹಾಗೂ ಪ್ರಮಾಣ ಪತ್ರವನ್ನು ನೀಡಲಾಯಿತು.

ಆರು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಕೃಷಿ ಯಂತ್ರೋಪಕರಣಗಳ ನಿರ್ವಹಣೆ ಹಾಗೂ ದುರಸ್ತಿ ಕುರಿತು ವಿವಿಧ ಸಂಪನ್ಮೂಲ ವ್ಯಕ್ತಿಗಳು ತಾಂತ್ರಿಕ ಮಾಹಿತಿ ಹಾಗೂ ಪ್ರಾತ್ಯಕ್ಷಿಕೆಯ ಮೂಲಕ ಮಾಹಿತಿ ನೀಡಿದರು. ಟ್ರ್ಯಾಕ್ಟರ್‌ನ ವಿವಿಧ ಘಟಕಗಳು ಹಾಗೂ ಇಂಜಿನ್‌ನ ನಿರ್ವಹಣೆ, ಭೂ ಉಳುಮೆ, ಬಿತ್ತನೆ, ಸಸ್ಯ



ಸಂರಕ್ಷಣೆ, ಕೊಯ್ಲು ಹಾಗೂ ರಾಶಿ ಮಾಡುವ ಯಂತ್ರಗಳ ಕಾರ್ಯನಿರ್ವಹಣೆ ಹಾಗೂ ದುರಸ್ತಿ ಕುರಿತು ಅಧಿವೇಶನಗಳನ್ನು ಹಮ್ಮಿಕೊಳ್ಳಲಾಯಿತು. ಕೃಷಿ ಯಂತ್ರೋಪಕರಣಗಳ ಪರೀಕ್ಷಣೆ ಮತ್ತು ಮೌಲ್ಯಮಾಪನದ ಕುರಿತು ಹಾಗೂ ಕೃಷಿಯಲ್ಲಿ ಡ್ರೋನ್ ಬಳಕೆಯ ಕುರಿತು ಸಮಗ್ರ ಮಾಹಿತಿ ನೀಡಲಾಯಿತು. ಗದಗ ಹಾಗೂ ಅಣ್ಣಿಗೇರಿಯ ಪ್ರತಿಷ್ಠಿತ ಟ್ರ್ಯಾಕ್ಟರ್ ನಿರ್ವಹಣಾ ಕಾರ್ಯಾಗಾರ ಮತ್ತು ಕೃಷಿ ಯಂತ್ರೋಪಕರಣಗಳ ತಯಾರಿಕಾ ಸಂಸ್ಥೆಗಳಿಗೆ ಪ್ರಾಯೋಗಿಕ ಭೇಟಿ ಏರ್ಪಡಿಸಲಾಯಿತು. ಗದಗ ಜಿಲ್ಲೆಯ ಒಟ್ಟು 30 ಜನ ಗ್ರಾಮೀಣ ಯುವಕರು ತರಬೇತಿಯಲ್ಲಿ ಭಾಗವಹಿಸಿ ಲಾಭ ಪಡೆದುಕೊಂಡರು.

## ಕೃಷಿ ತಂತ್ರಜ್ಞಾನ ವಸ್ತು ಪ್ರದರ್ಶನ – 2026



ಐ.ಸಿ.ಎ.ಆರ್–ಕೆ.ಹೆಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಇವರು 28-01-2026 ರಂದು ಹುಲಕೋಟಿಯ ಕೈಲಾಸ ಆಶ್ರಮದಲ್ಲಿ ಜಿಲ್ಲಾ ಮಟ್ಟದ ಕೃಷಿ ತಂತ್ರಜ್ಞಾನ ಪ್ರದರ್ಶನವನ್ನು ಆಯೋಜಿಸಿದ್ದರು. ಈ ಕಾರ್ಯಕ್ರಮವನ್ನು ಜಗದ್ಗುರು ಶ್ರೀ ಶ್ರೀ ಶ್ರೀ ಜಯೇಂದ್ರಪುರಿ ಮಹಾಸ್ವಾಮೀಜಿಯವರು ಹಾಗೂ ಎಎಸ್‌ಎಫ್ ಹುಲಕೋಟಿಯ ಅಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಶ್ರೀ ಡಿ.ಆರ್. ಪಾಟೀಲ ಇವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಜಂಟಿ ಕೃಷಿ ನಿರ್ದೇಶಕರಾದ ಶ್ರೀಮತಿ ಚೇತನಾ ಪಾಟೀಲ, ಉಪ ಕೃಷಿ ನಿರ್ದೇಶಕರಾದ, ಶ್ರೀಮತಿ ಸ್ಫೂರ್ತಿ ಜಿ.ಎಸ್., ಹುಲಕೋಟಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ನಾಗರತ್ನಾ ಬಾಳಹಳ್ಳಮಠ ಮತ್ತು ಉಪಾಧ್ಯಕ್ಷರಾದ ತಹಶೀಲ್ದಾರ್ ಅಬ್ದುಲ್ ಕರೀಮ್‌ಸಾಬ್ ಉಪಸ್ಥಿತರಿದ್ದರು.



ಡಾ. ಎಲ್.ಜಿ. ಹಿರೇಗೌಡರ, ಕೃಷಿ ವಿಜ್ಞಾನ ಕೇಂದ್ರದ ಸಲಹೆಗಾರರು ಹಾಗೂ ಎ.ಎಸ್.ಎಫ್ ಕಾರ್ಯದರ್ಶಿ, ಹುಲಕೋಟಿ ಕೃಷಿ ಪ್ರದರ್ಶನದ ಕುರಿತು ವಿವರಿಸಿದರು. ಡಾ. ಸುಧಾ ವಿ. ಮಂಕಣಿ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ವಿವಿಧ ಮಳಿಗೆಗಳಿಗೆ ಭೇಟಿಯನ್ನು ಆಯೋಜಿಸಿದರು.

ಮೊದಲ ಮಳಿಗೆಯಲ್ಲಿ ಪ್ರಮುಖ ಹಿಂಗಾರು ಬೆಳೆಗಳಾದ ಹಿಂಗಾರಿ ಜೋಳ, ಕಡಲೆ, ಕುಸುಬೆಯ ಸುಧಾರಿತ ತಳಿಗಳ ನೈಜ ಮಾದರಿಗಳನ್ನು ಪ್ರದರ್ಶಿಸಲಾಯಿತು. ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಬೆಳೆಯುವ ವಿಧಾನಗಳಿಗೆ ಸಂಬಂಧಿಸಿದ ವಿವಿಧ ತಂತ್ರಜ್ಞಾನಗಳ ಮಾಹಿತಿ ನೀಡಲಾಯಿತು. ಸಾವಯವ ಕೃಷಿಕರು ತಾವು ಬೆಳೆದ ತರಕಾರಿ, ಹಣ್ಣುಗಳು, ಮಸಾಲೆ ಪದಾರ್ಥಗಳು ಮತ್ತು ಬೆಲ್ಲವನ್ನು ಪ್ರದರ್ಶಿಸಿದರು.

ಮಣ್ಣಿನ ಮತ್ತು ನೀರಿನ ಸಂರಕ್ಷಣಾ ಕ್ರಮಗಳು, ಕೊಳವೆ ಬಾವಿ ಮತ್ತು ತೆರೆದ ಬಾವಿಯ ಮರುಪೂರಣ, ಸಮಗ್ರ ಬೇಸಾಯ ಪದ್ಧತಿ, ಸೂಕ್ಷ್ಮ ಪೋಷಕಾಂಶಗಳು, ಎರೆಹುಳು ಗೊಬ್ಬರ ಇತ್ಯಾದಿಗಳನ್ನು ಪ್ರದರ್ಶಿಸಿದರು.

ಎರಡನೇ ಮಳಿಗೆಯಲ್ಲಿ ಜೀವಾಮೃತ, ಬೀಜಾಮೃತ, ಪಂಚಗವ್ಯ, ನೀಮಾಸ್ತ್ರ, ಬ್ರಹ್ಮಾಸ್ತ್ರ ಮುಂತಾದ ನೈಸರ್ಗಿಕ ಕೃಷಿಯ ಪರಿಕರಗಳು ಮತ್ತು ಪ್ರಶಸ್ತಿ ವಿಜೇತ ರೈತರು ಬೆಳೆದ ಬೆಳೆಗಳ ನೈಜ ಮಾದರಿಗಳನ್ನು ಪ್ರದರ್ಶಿಸಲಾಯಿತು.

ಮೂರನೇ ಮಳಿಗೆಯಲ್ಲಿ ಪಶುಪಾಲನೆಗೆ ಸಂಬಂಧಿಸಿದ ತಂತ್ರಜ್ಞಾನಗಳಾದ ಒಣಬೇಸಾಯಕ್ಕೆ ಸೂಕ್ತವಾದ ಮೇವು ಬೆಳೆಗಳು, ಒಣ ಮೇವಿನ ಪುಷ್ಟೀಕರಣ, ಉಪ್ಪಿನ ಬಿಲ್ಲೆ, ಹೈಡ್ರೋಪೋನಿಕ್ಸ್ ಇತ್ಯಾದಿಗಳನ್ನು ಪ್ರದರ್ಶಿಸಲಾಯಿತು.

ನಾಲ್ಕನೇ ಮಳಿಗೆಯಲ್ಲಿ ಮಹಿಳಾ ರೈತರಿಗೆ ಸಹಾಯವಾಗುವ ಸಾಧನಗಳು, ಮಹಿಳಾ ಉದ್ಯಮಿಯರು ಮನೆಯಲ್ಲಿ ತಯಾರಿಸಿದ ಉತ್ಪನ್ನಗಳು, ಪೌಷ್ಟಿಕ ತೋಟ ಮುಂತಾದವುಗಳನ್ನು ಪ್ರದರ್ಶಿಸಲಾಯಿತು.



ಒಣಬೇಸಾಯದಿಂದ ಬೆಳೆಯಬಹುದಾದ ನವಣೆ, ಸಾಮೆ, ಊದಲು, ಹಾರಕ, ಸಜ್ಜೆ, ರಾಗಿ ಮುಂತಾದ ಸಿರಧಾನ್ಯಗಳನ್ನು ಪ್ರದರ್ಶಿಸಲಾಯಿತು. ಸಿರಿಧಾನ್ಯಗಳಿಂದ ತಯಾರಿಸಲಾದ ವಿವಿಧ ಮೌಲ್ಯವರ್ಧಿತ ಉತ್ಪನ್ನಗಳನ್ನು ಪ್ರದರ್ಶಿಸುವ ಮೂಲಕ ದಿನನಿತ್ಯದ ಆಹಾರದಲ್ಲಿ ಸಿರಿಧಾನ್ಯಗಳ ಮಹತ್ವವನ್ನು ವಿವರಿಸಲಾಯಿತು.

ಕೃಷಿಗೆ ಸಂಬಂಧಿಸಿದ ಸಣ್ಣ ಟ್ರಾಕ್ಟರ್, ಟ್ರಾಕ್ಟರ್ ಚಾಲಿತ ಮಲ್ಚರ್, ಶೇಂಗಾ ಬಳ್ಳಿ ಕೀಳುವ ಯಂತ್ರ, ಮೇವು ಕತ್ತರಿಸುವ ಯಂತ್ರ, ಹತ್ತಿ ಕಟ್ಟಿಗೆ ಪುಡಿ ಮಾಡುವ ಯಂತ್ರ, ರೋಟಾವೇಟರ್, ಸೌರ ಚಾಲಿತ ಕುಡಿ ಚಿವುಟುವ ಯಂತ್ರ, ಈರುಳ್ಳಿ ದೇಟು ಹಾಗೂ ಬೇರು ಕತ್ತರಿಸುವ ಯಂತ್ರ, ಸ್ಪೈರಲ್ ಸೆಪರೇಟರ್ ಮತ್ತು ಹಲವಾರು ಯಂತ್ರೋಪಕರಣಗಳನ್ನು ಪ್ರದರ್ಶಿಸಲಾಯಿತು.

ಕಿಸಾನ್ ಸಾರಥಿ ಮತ್ತು ಸಮುದಾಯ ಬಾನುಲಿ ಕೇಂದ್ರ (FM–89.6) ಗಳ ಮಾಹಿತಿಯನ್ನು ನೀಡಲಾಯಿತು.

ಕೃಷಿ ಬೆಳೆಗಳು, ನೈಸರ್ಗಿಕ ಕೃಷಿ ಹಾಗೂ ಕೃಷಿ ಉದ್ಯಮಗಳಿಗೆ ಸಂಬಂಧಿಸಿದ ಪುಸ್ತಕಗಳು, ಕೈಪಿಡಿಗಳು, ಮತ್ತು ಇತರ ವಿಸ್ತರಣಾ ಹಸ್ತಪ್ರತಿಗಳನ್ನು ರೈತರಿಗೆ, ಕೃಷಿ ಮಹಿಳೆಯರಿಗೆ, ಗ್ರಾಮೀಣ ಯುವಕರಿಗೆ ಮತ್ತು ಶಾಲಾ ಮಕ್ಕಳಿಗೆ ವಿತರಿಸಲಾಯಿತು. ಕೃಷಿ ತಂತ್ರಜ್ಞಾನ ಪ್ರದರ್ಶನವು ಕೃಷಿಕ ಸಮುದಾಯದ ಮೇಲೆ ಸಕಾರಾತ್ಮಕ ಪ್ರಭಾವ ಬೀರಿತು.

# ವೈಜ್ಞಾನಿಕ ಸಲಹಾ ಸಮಿತಿ ಸಭೆ

ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ವೈಜ್ಞಾನಿಕ ಸಲಹಾ ಸಮಿತಿಯ ಸಭೆಯನ್ನು ದಿನಾಂಕ 02-02-2026 ರಂದು ಹಮ್ಮಿಕೊಳ್ಳಲಾಯಿತು. ಡಾ. ಸುಧಾ ಮಂಕಣಿ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು ವೈಜ್ಞಾನಿಕ ಸಲಹಾ ಸಮಿತಿಯ ಸದಸ್ಯರನ್ನು ಸ್ವಾಗತಿಸಿ ಕಳೆದ ವೈಜ್ಞಾನಿಕ ಸಲಹಾ ಸಮಿತಿಯಲ್ಲಿ ತೆಗೆದುಕೊಂಡ ಕ್ರಮಗಳು ಹಾಗೂ ಸಲಹೆಗಳ ಕುರಿತು ವಿವರಣೆಯನ್ನು ನೀಡಿದರು. ಶ್ರೀ ಡಿ.ಆರ್.ಪಾಟೀಲ, ಅಧ್ಯಕ್ಷರು, ಅಗ್ರಿಕಲ್ಚರಲ್ ಸೈನ್ಸ್ ಫೌಂಡೇಶನ್ ಇವರು ಮಾತನಾಡಿ ನೈಸರ್ಗಿಕ ಕೃಷಿಯ ಕುರಿತು ರೈತರಿಗೆ ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಜೊತೆಗೆ ನಿರಂತರ ಆಧಾಯಕ್ಕಾಗಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಲು ರೈತರಿಗೆ ಮಾಹಿತಿಯನ್ನು ನೀಡಬೇಕು ಎಂದು ತಿಳಿಸಿದರು. ಮುಂದಿನ ವಿವಿಧ ನೈಸರ್ಗಿಕ ಕೃಷಿ ಹಾಗೂ ಸಮಗ್ರ ಕೃಷಿಯನ್ನು ಮಾಡಿದ ರೈತರನ್ನು ಸಭೆಗೆ ಕರೆಯಿಸಿ ಅವರ ವಿಚಾರಗಳನ್ನು ಹಂಚಿಕೊಳ್ಳಬೇಕೆಂದು ಸಲಹೆ ನೀಡಿದು.



ನಂತರ ಡಾ. ಸುಧಾ ಮಂಕಣಿ ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರವು ಹಮ್ಮಿಕೊಂಡ ವಿವಿಧ ಕಾರ್ಯಕ್ರಮಗಳನ್ನು ತಿಳಿಸಿದರು. ನಂತರ ಕೇಂದ್ರದ ವಿಜ್ಞಾನಿಗಳು 2025-26 ರ ಹಿಂಗಾರಿ ಮತ್ತು ಬೇಸಿಗೆ ಹಾಗೂ 2026 ರ ಮುಂಗಾರಿ ಕಾರ್ಯಕ್ರಮಗಳ ಕುರಿತು ವರದಿ ನೀಡಿದರು. ನಂತರ ವೈಜ್ಞಾನಿಕ ಸಲಹಾ ಸಮಿತಿಯ ಭಾಗವಹಿಸಿದ ಸದಸ್ಯರು ಹಾಗೂ ರೈತರೊಂದಿಗೆ ಚರ್ಚೆ ಹಾಗೂ ಸಂವಾದ ಕಾರ್ಯಕ್ರಮ ಏರ್ಪಡಿಸಲಾಯಿತು.

ಡಾ ಕೆ.ತಿಮ್ಮಪ್ಪ ಪ್ರಧಾನ ವಿಜ್ಞಾನಿ ಐ.ಸಿ.ಎ.ಆರ್-ಅಟಾರಿ, ಬೆಂಗಳೂರು, ಡಾ. ವೆಂಕಟೇಶುಲು, ವಿಸ್ತರಣಾ ನಿರ್ದೇಶಕರು, ತೋಟಗಾರಿಕಾ ವಿಶ್ವವಿದ್ಯಾಲಯ, ಬಾಗಲಕೋಟೆ, ಜಂಟಿ ಕೃಷಿ ನಿರ್ದೇಶಕರಾದ ಶ್ರೀಮತಿ ಚೇತನಾ ಪಾಟೀಲ, ಡಾ. ಶಿವಕುಮಾರ ರೆಡ್ಡೇರ್, ಡೀನ, ಪಶು ವೈದ್ಯಕೀಯ ಮಹಾವಿದ್ಯಾಲಯ, ಗದಗ ಡಾ. ಬಿ. ಜಿ ಶಿವಕುಮಾರ್, ವಿಜ್ಞಾನಿ, ಐ.ಸಿ.ಎ.ಆರ್-ಐ.ಜಿ.ಎಫ್.ಆರ್.ಐ ಧಾರವಾಡ ಇವರು ಸಲಹೆಗಳನ್ನು ನೀಡಿದರು. ವಿವಿಧ ಅಭಿವೃದ್ಧಿ ಇಲಾಖೆಗಳ ಜಿಲ್ಲಾಧಿಕಾರಿಗಳು, ಡಾ. ಮೋಟಗಿ ಬಿ.ಎನ್., ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ಸಂಶೋಧನಾ ಕೇಂದ್ರ ಅಣ್ಣಿಗೇರಿ, ಡಾ. ಕಲಾವತಿ ಕಂಬಳಿ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಎ.ಇ.ಇ.ಸಿ, ಗದಗ, ಪ್ರಗತಿಪರ ರೈತರು, ರೈತಮಹಿಳೆಯರು ಹಾಗೂ ಮಹಿಳಾ ಉದ್ದಿಮೆದಾರರು ಸಭೆಯಲ್ಲಿ ಭಾಗವಹಿದ್ದರು.



## ಪ್ರಧಾನ ಮಂತ್ರಿ ಧನ ಧಾನ್ಯ ಯೋಜನೆ ಅಧಿಕಾರಿಯ ಭೇಟಿ





ಪ್ರಧಾನ ಮಂತ್ರಿ ಧನ ಧಾನ್ಯ ಯೋಜನೆ ಪ್ರಗತಿಯನ್ನು ವೀಕ್ಷಿಸಲು ಶ್ರೀಮತಿ ಸಿ. ಶಿಖಾ ಐಎಎಸ್, ಕೇಂದ್ರ ನೋಡಲ್ ಅಧಿಕಾರಿ, PMDDKY ಗದಗ ಜಿಲ್ಲೆ, ಕೃಷಿ ನಿರ್ದೇಶಕರಾದ ಶ್ರೀಮತಿ ಚೇತನಾ ಪಾಟೀಲ, ಜಂಟಿ ಕೃಷಿ ನಿರ್ದೇಶಕರು, ಗದಗ, ಶ್ರೀ ಮಲ್ಲಯ್ಯ ಕೋರವನವರ, ಸಹಾಯಕ ಕೃಷಿ ನಿರ್ದೇಶಕರು ಗದಗ, ಡಾ. ಸುಧಾ ವಿ. ಮಂಕಣಿ, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಐ.ಸಿ.ಎ.ಆರ್.-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ, ಹುಲಕೋಟಿ ಹಾಗೂ ಜಿಲ್ಲೆಯ ವಿವಿಧ ಇಲಾಖೆಗಳ ಮುಖ್ಯಸ್ಥರೊಂದಿಗೆ ಗದಗ ಜಿಲ್ಲೆಯ ನಾಗಾವಿ ಗ್ರಾಮದಲ್ಲಿ ಹೆಚ್ಚಿನ ಇಳುವರಿ ನೀಡುವ ಕುಸುಬೆ ತಳಿಗಳ ರೈತರ ಕ್ಷೇತ್ರಕ್ಕೆ ಭೇಟಿ ನೀಡಿ ರೈತರೊಂದಿಗೆ ವಿವಿಧ ಪ್ರಭೇದಗಳ ಕಾರ್ಯಕ್ಷಮತೆಯ ಕುರಿತು ಚರ್ಚಿಸಿದರು.

## ದೇಸಿ ಕೋರ್ಸಿನ 4ನೇ ತಂಡದ ಉದ್ಘಾಟನೆ



ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಸಮೇತಿ-ಉತ್ತರ, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಕೃಷಿ ಇಲಾಖೆ, ಗದಗ ಹಾಗೂ ಮ್ಯಾನೇಜ್, ಹೈದರಾಬಾದ ಇವರ ಸಂಯುಕ್ತಾಶ್ರಯದಲ್ಲಿ ನಡೆಯುವ ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣೆಯಲ್ಲಿ ಡಿಪ್ಲೋಮಾ ಕೋರ್ಸಿನ ಉದ್ಘಾಟನಾ ಸಮಾರಂಭವು ದಿನಾಂಕ 19-02-2026 ರಂದು ಜರುಗಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೃಷಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ.ಪಿ.ಎಲ್.ಪಾಟೀಲ ಅವರು, ಶಿಬಿರಾರ್ಥಿಗಳು ದೇಸಿ ಕೋರ್ಸಿನಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಕೃಷಿಯಲ್ಲಿನ ವಿವಿಧ ತಾಂತ್ರಿಕತೆಗಳನ್ನು ರೈತರಿಗೆ ಮುಟ್ಟುವಂತೆ ಕಾರ್ಯ ನಿರ್ವಹಿಸಬೇಕು ಎಂದು ಕರೆ ನೀಡಿದರು. ಅಲ್ಲದೇ ಪರಿಕರ ಮಾರಾಟಗಾರರು ಕೇವಲ ಲಾಭಕ್ಕೆ ವಹಿವಾಟು ಮಾಡದೇ, ಕೃಷಿಕರ ಏಳ್ಗೆಗಾಗಿಯೂ ಶ್ರಮ ವಹಿಸಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿಸ್ತರಣಾ ನಿರ್ದೇಶಕರಾದ ಡಾ. ಎಮ್.ವಿ.ಮಂಜುನಾಥ ಇವರು ರೈತರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಪರಿಕರ ಮಾರಾಟಗಾರರ ಜವಾಬ್ದಾರಿ ಬಹಳ ಮುಖ್ಯ. ದೇಸಿ ತರಬೇತಿಯು ಇಂತಹ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಲು ನೆರವಾಗುತ್ತದೆ, ಇದರಿಂದ ಕೃಷಿ ಪರಿಕರ ಮಾರಾಟಗಾರರು ಕೃಷಿ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಇಲಾಖೆ ಹಾಗೂ ರೈತರ ನಡುವೆ ಕೊಂಡಿಯಂತೆ ಕಾರ್ಯನಿರ್ವಹಿಸಬೇಕು ಎಂದರು ಹಾಗೂ ದೇಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿರುವ ಹುಲಕೋಟಿಯ ಕೃಷಿ ವಿಜ್ಞಾನ ಕೇಂದ್ರವನ್ನು ಶ್ಲಾಘಿಸಿದರು.

ಮುಖ್ಯ ಅತಿಥಿ ಸ್ಥಾನವಹಿಸಿದ್ದ ಡಾ.ಎಸ್.ಎನ್.ಜಾಧವ್, ಸಂಯೋಜಕರು, ಸಮೇತಿ-ಉತ್ತರ, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ದೇಸಿ ತರಬೇತಿಯಲ್ಲಿ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಹಲವಾರು ಕೃಷಿ ಸಂಭಂಧಿತ ವಿಷಯಗಳ ಕುರಿತು ಬೋಧನೆ ನೀಡಲಾಗುವುದು ಹಾಗೂ ವಿವಿಧ ಕೃಷಿ ತಾಕುಗಳಿಗೆ ಕ್ಷೇತ್ರ ಭೇಟಿಗಳನ್ನು ಏರ್ಪಡಿಸಲಾಗುವುದು. ಎಲ್ಲಾ ಶಿಬಿರಾರ್ಥಿಗಳು ತಮ್ಮ ತನು-ಮನ-ಧನವನ್ನು ಅರ್ಪಿಸಿ ತರಬೇತಿಯಲ್ಲಿ ಭಾಗವಹಿಸಬೇಕು ಎಂದು ಮಾತನಾಡಿದರು. ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿಯ ಮುಖ್ಯಸ್ಥರಾದ ಡಾ. ಸುಧಾ ವ್ಹಿ. ಮಂಕಣಿ ಇವರು ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿಯು ಕಳೆದ ಮೂರು ವರ್ಷಗಳಿಂದ ಯಶಸ್ವಿಯಾಗಿ ದೇಸಿ ತರಬೇತಿಯನ್ನು ಹಮ್ಮಿಕೊಂಡಿದ್ದು, ಇಂದು ಉದ್ಘಾಟನೆಯಾಗಿರುವ ತರಬೇತಿ ಕಾರ್ಯಕ್ರಮಕ್ಕೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಕೃಷಿ ವಿಜ್ಞಾನ ಕೇಂದ್ರದಿಂದ ಒದಗಿಸಲಾಗುವುದು ಎಂದು ಭರವಸೆ ನೀಡಿದರು. ಕೃಷಿ ಪರಿಕರ ಮಾರಾಟಗಾರರು, ತಮ್ಮ ಸಮಯವನ್ನು ವಿನಿಯೋಗಿಸಿ ಪ್ರಸ್ತುತ ತರಬೇತಿಯಲ್ಲಿ ಆಸಕ್ತಿ ವಹಿಸಿ ಪಾಲ್ಗೊಳ್ಳುವಂತೆ ಕರೆ ನೀಡಿದರು.



ದೇಸಿ ಫೆಸಿಲಿಟೇಟರ್ ಆದ ಶ್ರೀ ಎಸ್.ಕೆ.ಮುದ್ಲಾಪುರ ಇವರು ದೇಸಿ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಮಂಜುಪ್ರಕಾಶ ಪಾಟೀಲ ಸ್ವಾಗತಿಸಿದರು, ಶ್ರೀ ಎನ್.ಎಚ್.ಭಂಡಿ ವಂದಿಸಿದರು ಮತ್ತು ಡಾ. ವಿನಾಯಕ ನಿರಂಜನ್ ಕಾರ್ಯಕ್ರಮವನ್ನು ನಿರೂಪಿಸಿದರು.

## ಗಿಡ ನೆಡುವ ಅಭಿಯಾನ

ಮಾರ್ಚ್ 5, 2026 ರಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವರಾದ ಸನ್ಮಾನ್ಯ ಶ್ರೀ ಶಿವರಾಜ್ ಸಿಂಗ್ ಚೌಹಾಣ್ ಅವರ ಜನ್ಮ ದಿನಾಚರಣೆ ಅಂಗವಾಗಿ ಐ.ಸಿ.ಎ.ಆರ್.-ಕೆ.ಎಚ್.ಪಾಟೀಲ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಪರಿಸರ ಜಾಗೃತಿ, ಸುಸ್ಥಿರ ಕೃಷಿ ಮತ್ತು ನೈಸರ್ಗಿಕ ಕೃಷಿಯನ್ನು ಹೆಚ್ಚಿಸುವ ಮಹತ್ವದ ಗುರಿಯನ್ನು ಹೊಂದಿದೆ.



ಕೆವಿಕೆಯ ವಿಜ್ಞಾನಿಗಳು, ಸಿಬ್ಬಂದಿ ಸದಸ್ಯರು, ರೈತರು, ರೈತ ಮಹಿಳೆಯರು ಮತ್ತು ಗ್ರಾಮೀಣ ಯುವಕರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

## ಐಸಿಎಆರ್–ಕೆವಿಕೆ, ಗದಗಗೆ ಅತ್ಯುತ್ತಮ ಮೌಖಿಕ ಪ್ರಸ್ತುತಿಯ ಪ್ರಶಸ್ತಿ




ನವ ದೆಹಲಿಯ ಎನ್.ಎ.ಎಸ್.ಸಿ. ಕಾಂಪ್ಲೆಕ್ಸ್‌ನಲ್ಲಿ ಮಾರ್ಚ್ 12 – 14 ಮಾರ್ಚ್, 2026ರ ವರೆಗೆ ಮೂರುದಿನಗಳ ಕಾಲ ನಡೆದ ಗ್ಲೋಬಲ್ ಕಾನ್ಫರೆನ್ಸ್ ಆನ್ ವುಮನ್ ಇನ್ ಅಗ್ರಿ–ಫುಡ್ ಸಿಸ್ಟಮ್ಸ್ (GCWAS 2026) ರಲ್ಲಿ ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು ಡಾ. ಸುಧಾ ವಿ. ಮಂಕಣಿ ಇವರು "ಕೃಷಿ ಉದ್ಯಮಗಳ ವೈವಿಧ್ಯೀಕರಣದ ಮೂಲಕ ಮಹಿಳೆಯರ ಆರ್ಥಿಕ ಸಬಲೀಕರಣ" ಎಂಬ ಸಂಶೋಧನಾ ಲೇಖನವನ್ನು ಮಂಡಿಸಿದರು. ಈ ಲೇಖನೆಯ ಪ್ರಸ್ತುತಿಯನ್ನು ಗುರುತಿಸಿ ಅತ್ಯುತ್ತಮ ಸಂಶೋಧನಾ ಲೇಖನ ಎಂದು ಪರಿಗಣಿಸಿ ಪ್ರಶಸ್ತಿ ನೀಡಿ ಗೌರವಿಸಿದರು.

## "ಪ್ರಧಾನಮಂತ್ರಿ ಕಿಸಾನ ಸಮ್ಮಾನ ನಿಧಿ" ಕಾರ್ಯಕ್ರಮದ ನೇರಪ್ರಸಾರ



ಐ.ಸಿ.ಎ.ಆರ್ – ಕೆ.ಹೆಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಗದಗ ವತಿಯಿಂದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 22ನೇ ಕಂತಿನ ನೇರ ಪ್ರಸಾರವನ್ನು ದಿನಾಂಕ 13-03-2025 ರಂದು ಆಯೋಜಿಸಲಾಯಿತು. ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು.

ಡಾ.ಸುಧಾ ವ್ಹಿ. ಮಂಕಣಿ, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಈ ಕಾರ್ಯಕ್ರಮದ ಉದ್ದೇಶದ ಬಗ್ಗೆ



ಮಾಹಿತಿಯನ್ನು ನೀಡಿದರು ಮತ್ತು ಪಿಎಂ–ಕಿಸಾನ್ ಸಮ್ಮಾನ ನಿಧಿ ಯೋಜನೆಯ ಕುರಿತು ವಿವರವಾಗಿ ಮಾತನಾಡಿದರು. ಈ ಯೋಜನೆಯಡಿಯಲ್ಲಿ ರೈತರಿಗೆ ರೂ.6000/– ಸಹಾಯಧನವನ್ನು ಮೂರು ಹಂತಗಳಲ್ಲಿ ರೂ.2000/–ರಷ್ಟು ನೀಡಲಾಗುತ್ತದೆ, ಇದರಿಂದ ಅವರು ಉತ್ತಮ ಗುಣಮಟ್ಟದ ಬೀಜ, ರಾಸಾಯನಿಕ ಗೊಬ್ಬರ ಮತ್ತು ಇತರ ಕೃಷಿ ಪರಿಕರಗಳನ್ನು ಖರೀದಿಸಬಹುದು ಮತ್ತು ಬೆಳೆ ಉತ್ಪಾದನೆಯನ್ನು ಹೆಚ್ಚಿಸಬಹುದು ಎಂದು ವಿವರಿಸಿದರು. ಸುಮಾರು 189 ರೈತರು, ಕೃಷಿ ಮಹಿಳೆಯರು ಹಾಗೂ ಗ್ರಾಮೀಣ ಯುವಕರು ನೇರ ಪ್ರಸಾರವನ್ನು ವೀಕ್ಷಿಸಿದರು.

## “ಕೃಷಿ ಮತ್ತು ಗ್ರಾಮೀಣ ಪರಿವರ್ತನೆ” ಎಂಬ ವಿಷಯದ ಕುರಿತು ಬಜೆಟ್ ನಂತರದ ವೆಬಿನಾರ್ 2026



ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ್ ಕೃಷಿ ವಿಜ್ಞಾನ ಕೇಂದ್ರ, ಗದಗ ಜಿಲ್ಲೆಯ ಇದರ  ವಿಜ್ಞಾನಿಗಳು ಹಾಗೂ ಗೋಡಂಬಿ ಬೆಳೆಯುವ ರೈತರಿಗೆ 06–03–2026 ರಂದು “ಕೃಷಿ ಮತ್ತು ಗ್ರಾಮೀಣ ಪರಿವರ್ತನೆ” ಎಂಬ ವಿಷಯದ ಕುರಿತು ಬಜೆಟ್ ನಂತರದ ವೆಬಿನಾರ್ 2026ನ್ನು ಆಯೋಜಿಸಲಾಯಿತು.

ಗೋಡಂಬಿ, ತೆಂಗಿನಕಾಯಿ, ಶ್ರೀಗಂಧ, ಅಗರ್‌ವುಡ್, ಬಾದಾಮಿ, ವಾಲ್‌ನಟ್ಸ್ ಮತ್ತು ಪೈನ್ ಬೀಜಗಳಂತಹ ಸಂಭಾವ್ಯ ಬೆಳೆಗಳನ್ನು ಅನ್‌ಲಾಕ್ ಮಾಡುವ ಮೂಲಕ ಹೆಚ್ಚಿನ ಮೌಲ್ಯದ ಕೃಷಿಯನ್ನು ಉತ್ತೇಜಿಸುವುದು ವೆಬಿನಾರ್‌ನ ಉದ್ದೇಶವಾಯಿತು. ಕೃಷಿಗಾಗಿ AI–ಚಾಲಿತ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವಾದ ಭಾರತ್ ವಿಸ್ತಾರ್ ನೀಡುವ ಅವಕಾಶಗಳ ಬಗ್ಗೆಯೂ ಇದು ಚರ್ಚಿಸಿತು. ಪಶುಸಂಗೋಪನೆ ಮೌಲ್ಯ ಸರಪಳಿಯಲ್ಲಿ ಖಾಸಗಿ ವಲಯದ ಹೂಡಿಕೆ ಮತ್ತು ಉದ್ಯಮಶೀಲತೆ, ಮೀನುಗಾರಿಕೆಗಾಗಿ ಜಲಾಶಯಗಳು ಮತ್ತು ಅಮೃತ ಸರೋವರಗಳ ಸಮಗ್ರ ಅಭಿವೃದ್ಧಿ, ಕರಾವಳಿ ಮೀನುಗಾರಿಕೆ ಮೌಲ್ಯ ಸರಪಳಿಗಳನ್ನು ಬಲಪಡಿಸುವುದು ಮತ್ತು ಸ್ವಸಹಾಯ ಉದ್ಯಮಿಗಳು–ಗ್ರಾಮೀಣ ಪರಿವರ್ತನೆಗಾಗಿ ಮಾರುಕಟ್ಟೆ ಮಾರ್ಗಗಳು (SHE-Marts) ಮೂಲಕ ಗ್ರಾಮೀಣ ಮಹಿಳಾ ಉದ್ಯಮಿಗಳು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಪ್ರವೇಶವನ್ನು ವಿಸ್ತರಿಸುವ ಕುರಿತು ಚರ್ಚಿಸಲಾಯಿತು.



## ಅಂತರರಾಷ್ಟ್ರೀಯ ಮಹಿಳಾ ದಿನ – 2026



ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ್ ಕೃಷಿ ವಿಜ್ಞಾನ ಕೇಂದ್ರ, ಗದಗ ಮಾರ್ಚ್ 8, 2026 ರಂದು "ಗೆಲುವಿಗೆ ಕೊಡುಗೆ" ಎಂಬ ವಿಷಯದ ಮೇಲೆ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಿತು, ಮಹಿಳೆಯರು ಮತ್ತು ಬಾಲಕಿಯರಿಗೆ ಬೆಂಬಲ, ಅವಕಾಶಗಳು, ಮಾರ್ಗದರ್ಶನ ಮತ್ತು ಸಂಪನ್ಮೂಲಗಳನ್ನು ಒದಗಿಸುವುದು ಎಲ್ಲರಿಗೂ ಸಮಾನ ಸೌಲಭ್ಯಗಳನ್ನು ನೀಡವುದು.

ಗದಗದ ನಿವೃತ್ತ ಸಹಾಯಕ ತೋಟಗಾರಿಕೆ ನಿರ್ದೇಶಕ ಶ್ರೀ ಸುರೇಶ್ ಕುಂಬಾರ್ ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುತ್ತಾ, ಮಹಿಳೆಯರಿಗೆ ಪುರುಷರಂತೆಯೇ ಸಮಾನ ಹಕ್ಕುಗಳಿವೆ ಎಂದು ಒತ್ತಿ ಹೇಳಿದರು. ಮಹಿಳಾ ದಿನವನ್ನು ಒಂದೇ ದಿನಕ್ಕೆ ಆಚರಿಸಬಾರದು ಎಂದು ಅವರು ಹೇಳಿದರು. ಕುಟುಂಬದಲ್ಲಿ ಮಹಿಳೆಯರನ್ನು ಗೌರವಿಸಿದಾಗ, ಮನೆ ಸಂತೋಷ ಮತ್ತು ಸಮೃದ್ಧವಾಗುತ್ತದೆ ಎಂದು ತಿಳಿಸಿದರು.

ಮಹಿಳೆಯರು ಸ್ವತಂತ್ರವಾಗಿ ನಿಲ್ಲುವ ಮತ್ತು ಸವಾಲುಗಳನ್ನು ಧೈರ್ಯದಿಂದ ಎದುರಿಸುವ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಎನ್.ಎಚ್.ಭಂಡಿ, ವಿಷಯ ತಜ್ಞರು (ಮಣ್ಣು ವಿಜ್ಞಾನ), ಮಹಿಳಾ ಸಬಲೀಕರಣವು ಕುಟುಂಬದ ಯೋಗಕ್ಷೇಮವನ್ನು ಸುಧಾರಿಸಲು ಮತ್ತು ರಾಷ್ಟ್ರೀಯ ಪ್ರಗತಿಗೆ ಕೊಡುಗೆ ನೀಡಲು ಪ್ರಮುಖವಾಗಿದೆ ಎಂದು ಹೇಳಿದರು. ಅವರ ಪ್ರಕಾರ, ಕುಟುಂಬದ ಅಭಿವೃದ್ಧಿಗೆ ಆತ್ಮ ವಿಶ್ವಾಸ, ಜ್ಞಾನ, ಸಕಾರಾತ್ಮಕ ನಡವಳಿಕೆ, ಬೆಂಬಲ ನೀಡುವ ಸಂಬಂಧಗಳು, ಧೈರ್ಯ ಮತ್ತು ತಾಳ್ಮೆ ಅತ್ಯಗತ್ಯ ಎಂದು ತಿಳಿಸಿದರು.

ಡಾ. ಮಂಜುಪ್ರಕಾಶ್ ಪಾಟೀಲ್, ವಿಷಯ ತಜ್ಞರು (ಕೃಷಿ ವಿಸ್ತರಣೆ) ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಮಹತ್ವ ಮತ್ತು ಕುಟುಂಬದೊಳಗೆ ಅವರ ಅರ್ಥಪೂರ್ಣ ಪಾತ್ರವನ್ನು ಒತ್ತಿ ಹೇಳಿದರು.



ಡಾ. ವಿನಾಯಕ ಎಚ್. ನಿನಾಂಜನ್, ವಿಷಯ ತಜ್ಞರು (ಕೃಷಿ ಇಂಜನಿಯರಿಂಗ್), ಶ್ರೀಮತಿ ಲಲಿತಾ ಎಸ್. ಅಸೂಟಿ, ಕಂಪ್ಯೂಟರ್ ಪ್ರೋಗ್ರಾಮರ್ ಕಾರ್ಯಕ್ರಮದಲ್ಲಿ ಭಾಗವಹಿಸಿದರು. 185 ಕ್ಕೂ ಹೆಚ್ಚು ಜನ ರೈತರು, ರೈತ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕಾಡಾ ಯೋಜನೆಯಡಿ ರೈತರ ಪ್ರವಾಸ ಭೇಟಿ



ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕೃಷ್ಣಾ ಯೋಜನೆ (ಕಾಡಾ) ಅಡಿ ದಿನಾಂಕ 23-02-2026 ರಂದು ಶೈಕ್ಷಣಿಕ ಪ್ರವಾಸದ ಕಾರಣ ಸುಮಾರು 100 ಜನ ರೈತರು ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ್ ಕೃಷಿ ವಿಜ್ಞಾನ ಕೇಂದ್ರಕ್ಕೆ ಇಲಾಕೆಯ ಅಧಿಕಾರಿಗಳೊಂದಿಗೆ ಭೇಟಿ ನೀಡಿದರು.

ರೈತರನ್ನು ಉದ್ದೇಶಿಸಿ ಡಾ. ಮಂಜುಪ್ರಕಾಶ್ ಪಾಟೀಲ್, ವಿಷಯ ತಜ್ಞರು (ಕೃಷಿ ವಿಸ್ತರಣೆ) ಇವರು ಒಣಬೇಸಾಯದ ತೋಟಗಾರಿಕೆ ಬೆಳೆಗಳಾದ ಗೋಡಂಬಿ, ಮಾವು, ಪೇರಲ ಮತ್ತು ಹುಣಸೆ ಹಣ್ಣಿನಂತಹ ಗದಗ ಜಿಲ್ಲೆಯ ಪ್ರಮುಖ ಬೆಳೆಗಳ ಬಗ್ಗೆ ಮಾಹಿತಿ ನೀಡಿದರು

ಡಾ. ವಿನಾಯಕ ಎಚ್. ನಿನಾಂಜನ್, ವಿಷಯ ತಜ್ಞರು (ಕೃಷಿ ಇಂಜನಿಯರಿಂಗ್), ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿಯ ವಿವಿಧ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಡಾ. ಚೇತನ್ ಬಾಬು ಆರ್.ಟಿ., ವಿಷಯ ತಜ್ಞರು (ಬೇಸಾಯ ಶಾಸ್ತ್ರ) ಇವರು ವಿವಿಧ ಬೆಳೆಗಳ ಕೃಷಿ ಪದ್ಧತಿಗಳ ಕುರಿತು ವಿವರಿಸಿದರು.

## ಜನವರಿ ದಿಂದ ಮಾರ್ಚ್, 2026 ರವರೆಗೆ ಆಯೋಜಿಸಿದ ತರಬೇತಿಗಳ ವಿವರ

| ಅ ಸಂ | ದಿನಾಂಕ | ವಿಷಯ | ತರಬೇತಿಗಳ ಸಂಖ್ಯೆ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 1 | 19-01-2026 ರಿಂದ 24-01-2026 | ಟ್ರ್ಯಾಕ್ಟರ್ ಮತ್ತು ಕೃಷಿ ಯಂತ್ರೋಪಕರಣಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಮತ್ತು ಕೃಷಿಯಲ್ಲಿ ಡ್ರೋನ್‌ಗಳ ಅವಲೋಕನ | 1 | 30 |
| 2 | 29-01-2026 ರಿಂದ 31-01-2026 | ಪಿ.ಎಮ್.ಎಫ್.ಎಮ್.ಇ. ಫಲಾನುಭವಿಗಳಿಗೆ ಸಂಸ್ಕರಣೆ, ಪ್ಯಾಕಿಂಗ್, ಪರವಾನಗಿ, ಮಾರುಕಟ್ಟೆ ಕುರಿತು ಮಾಹಿತಿ | 2 | 60 |
| 3 | 22-01-2026 ರಿಂದ 23-01-2026 | ಪ್ಯಾರಾ ಪಶುವೈದ್ಯರಿಗೆ ಸುಧಾರಿತ ತಂತ್ರಜ್ಞಾನಗಳ ಕುರಿತು ತರಬೇತಿ | 1 | 55 |
| 4 | 23-02-2026 ರಿಂದ 24-02-2026 | ರೈತ ಉತ್ಪಾದಕರ ಸಂಘಗಳ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳಿಗೆ ಮತ್ತು ನಿರ್ದೇಶಕರುಗಳಿಗೆ ತರಬೇತಿ ಮತ್ತು ಸಾಮರ್ಥ್ಯ ವರ್ಧನೆ ಕಾರ್ಯಕ್ರಮ | 1 | 30 |
| 5 | 12-02-2026 | ಕೃಷಿಯಲ್ಲಿ ಡ್ರೋನ್‌ಗಳ ಬಳಕೆ | 1 | 40 |
| 6 | 06-03-2026 | ಮಣ್ಣಿನ ಫಲವತ್ತತೆ ನಿರ್ವಹಣೆ | 1 | 61 |
| 7 | 28-03-2026 | ಮುಂಗಾರು ಬೆಳೆಗಳಲ್ಲಿ ಸಮಗ್ರ ಬೆಳೆ ನಿರ್ವಹಣೆ | 1 | 40 |

## ತರಬೇತಿ /ಕಾರ್ಯಾಗಾರಗಳಲ್ಲಿ ಕೇಂದ್ರದ ಸಿಬ್ಬಂದಿ ಭಾಗವಹಿಸಿದ ವಿವರ (ಜನವರಿ ರಿಂದ ಮಾರ್ಚ್, 2026 ವರೆಗೆ)

| ತರಬೇತಿ ವಿಷಯ | ಅವಧಿ (ದಿನಗಳು) | ದಿನಾಂಕ | ಆಯೋಜಿಸಿದ ಸಂಸ್ಥೆ |
|---|---|---|---|
| **ಡಾ. ಸುಧಾ ವ್ಹಿ. ಮಂಕಣಿ, ಹಿರಿಯ ವಿಜ್ಞಾನಿಗಳು & ಮುಖ್ಯಸ್ಥರು** | | | |
| ಗ್ಲೋಬಲ್ ಕಾನ್ಫರೆನ್ಸ್ ಆನ್ ವುಮನ್ ಇನ್ ಅಗ್ರಿ-ಫುಡ್ ಸಿಸ್ಟಮ್ಸ್ (GCWAS 2026) | 3 | 12-03-2026 ರಿಂದ 14-03-2026 | ಐ.ಸಿ.ಎ.ಆರ್-ಐ.ಎ.ಆರ್.ಐ, ಪೂಸಾ, ನವ ದೆಹಳ |
| **ಡಾ. ವಿನಾಯಕ ನಿರಂಜನ್, ವಿಷಯ ತಜ್ಞರು, ಕೃಷಿ ಇಂಜನಿಯರಿಂಗ್** | | | |
| ಗೋಡಂಬಿ ಸೇಬಿನ ಮೌಲ್ಯವರ್ಧನೆ ಕುರಿತು ಗೋಡಂಬಿ ದಿನ ಮತ್ತು ವಿಚಾರ ಸಂಕಿರಣ | 1 | 11-03-2026 | ಐ.ಸಿ.ಎ.ಆರ್-ಡಿ.ಸಿ.ಆರ್, ಪುತ್ತೂರ |
| **ಡಾ. ಚೇತನ್ ಬಾಬು ಆರ್.ಟಿ., ವಿಷಯ ತಜ್ಞರು, ಬೇಸಾಯ ಶಾಸ್ತ್ರ** | | | |
| ಕೃಷಿಧಾರೆ ಡಿ.ಎಸ್.ಎಸ್ ತಜ್ಞರ ವ್ಯವಸ್ಥೆಯ ಕುರಿತು ಕೆವಿಕೆ ವಿಜ್ಞಾನಿಗಳಿಗೆ ತರಬೇತಿ ಕಾರ್ಯಕ್ರಮ | 1 | 03-03-2026 | ಕೃಷಿ ವಿಶ್ವ ವಿದ್ಯಾಲಯ, ಧಾರವಾಡ |
| **ಡಾ. ಮಂಜುಪ್ರಕಾಶ್ ಪಾಟೀಲ, ವಿಷಯ ತಜ್ಞರು, ಕೃಷಿ ವಿಸ್ತರಣೆ** | | | |
| ಪ್ರಾದೇಶಿಕ ಸಮುದಾಯ ರೇಡಿಯೋ ಸಮ್ಮೇಳನ (ದಕ್ಷಿಣ) | 2 | 07-01-2026 & 08-01-2026 | ಕೊಚ್ಚಿ, ಕೇರಳ |
| ಕಿಸಾನ್ ಸಾರಥಿ 2.0ರ ನವೀಕರಿಸಿದ ವೈಶಿಷ್ಟ್ಯಗಳ ಕುರಿತು ಸಾಮರ್ಥ್ಯ ವರ್ಧನೆ ಮತ್ತು ಜಾಗೃತಿ ಕಾರ್ಯಾಗಾರ | 1 | 05-02-2026 | ಐ.ಸಿ.ಎ.ಅರ್.-ಅಟಾರಿ, ಬೆಂಗಳೂರು |

# ರೈತರ ಕ್ಷೇತ್ರಗಳಿಗೆ ಭೇಟಿ



ಪ್ರಾತ್ಯಕ್ಷಿಕೆ – ಕಡಲೆ



ಪ್ರಾತ್ಯಕ್ಷಿಕೆ - ಹಿಂಗಾರಿ ಜೋಳ



ಮುಂಚೂಣಿ ಪ್ರಾತ್ಯಕ್ಷಿಕೆ – ಕುಸುಬೆ



ಮುಂಚೂಣಿ ಪ್ರಾತ್ಯಕ್ಷಿಕೆ – ಗೋಧಿ



ಮುಂಚೂಣಿ ಪ್ರಾತ್ಯಕ್ಷಿಕೆ – ಸೋಯಾಅವರೆ



ಮುಂಚೂಣಿ ಪ್ರಾತ್ಯಕ್ಷಿಕೆ – ಮಾರುಕಟ್ಟೆ ಆಧಾರಿತ ತರಕಾರಿ ಕೆಫೆಟೇರಿಯಾ



ಮುಂಚೂಣಿ ಪ್ರಾತ್ಯಕ್ಷಿಕೆ –ಟೊಮ್ಯಾಟೊ



ಮುಂಚೂಣಿ ಪ್ರಾತ್ಯಕ್ಷಿಕೆ – ಈರುಳ್ಳಿ ಬೀಜೋತ್ಪಾದನೆ



ಗೊಂಚಲು ಪ್ರಾತ್ಯಕ್ಷಿಕೆ –ಜೈವಿಕ ಬಲವರ್ಧಿತ ಗೋಧಿ



ಗೊಂಚಲು ಪ್ರಾತ್ಯಕ್ಷಿಕೆ–ಶೇಂಗಾ



ನಿಕ್ರಾ–ಗೊಂಚಲು ಪ್ರಾತ್ಯಕ್ಷಿಕೆ– ಗೋವಿನ ಜೋಳ


**ಪ್ರಧಾನ ಸಂಪಾದಕರು**

ಡಾ॥ ಸುಧಾ ವಿ. ಮಂಕಣಿ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

**ಸಂಪಾದಕರು**

ಡಾ॥ ಮಂಜುಪ್ರಕಾಶ ಪಾಟೀಲ, ವಿಷಯ ತಜ್ಞರು (ಕೃಷಿ ವಿಸ್ತರಣೆ)

**ಕಾರ್ಯಕ್ರಮಗಳ ಸಂಯೋಜಕರು:**

ಶ್ರೀ ಎನ್.ಎಚ್.ಭಂಡಿ, ವಿಷಯ ತಜ್ಞರು (ಮಣ್ಣು ವಿಜ್ಞಾನ)

ಡಾ॥ ವಿನಾಯಕ ಎಚ್. ನಿರಂಜನ, ವಿಷಯ ತಜ್ಞರು (ಅಗ್ರಿ ಇಂಜಿನಿಯರಿಂಗ)

ಡಾ॥ ಪ್ರವೀಣ ಕರಿಕಟ್ಟಿ, ಕಾರ್ಯಕ್ರಮ ಸಹಾಯಕರು (ಲ್ಯಾಬ್ಸ್)

ಶ್ರೀಮತಿ ಹೇಮಾವತಿ ಹಿರೇಗೌಡರ, ವಿಷಯ ತಜ್ಞರು (ತೋಟಗಾರಿಕೆ)

ಡಾ॥ ಚೇತನ್ ಬಾಬು ಆರ್.ಟಿ. ವಿಷಯ ತಜ್ಞರು (ಬೇಸಾಯ ಶಾಸ್ತ್ರ)

ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ

**ವಿನ್ಯಾಸ ಹಾಗೂ ಅಕ್ಷರ ಜೋಡಣೆ:**

ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕಯಂತ್ರ)

ಶ್ರೀ ಟಿ.ಕೆ.ಸಾಯಿ ಸ್ವರೂಪ ರಾವ್, ಸ್ಟೆನೋಗ್ರಾಫರ್

**ಸಹಾಯ:**

ಶ್ರೀ ಎಮ್.ಬಿ.ಜಕ್ಕನಗೌಡರ, ಕಚೇರಿ ಅಧೀಕ್ಷಕರು



ಮುದ್ರಕರು ಹಾಗೂ ಪ್ರಕಾಶಕರು: ಡಾ॥ ಸುಧಾ ವಿ. ಮಂಕಣಿ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು,
ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ–582205, ಗದಗ ಜಿಲ್ಲೆ, ಕರ್ನಾಟಕ ರಾಜ್ಯ
ಫೋನ್: (08372)289325, ಇ–ಅಂಚೆ : kvkhulkoti@gmail.com, ಅಂತರ್ ಜಾಲ: https://khpkvk.in